ಪೆನ್ಸಿಲ್ ಕೇಸ್ ಮಾತ್ರ ಇರುತ್ತೆ. ಹೀಗಾಗಿ ಪುಸ್ತಕದ ಭಾರ ಹೊರುವ ಪ್ರಮೇಯವೇ ಇಲ್ಲ! ಆಯಾಯ ದಿವಸಗಳ ಪಠ್ಯವಿಷಯಗಳ ವೇಳಾಪಟ್ಟಿಯನ್ನೂ ಶಾಲೆಗೆ ಹೋದ ನಂತರವೇ ಕೊಡುತ್ತಾರೆ. ಪೋಷಕರ ದಿನದಂದು ಶಾಲೆಗೆ ಹೋಗಿ ನೋಡಿದಾಗ ತಮ್ಮ ಮಕ್ಕಳು ಕಲಿತ ವಿವರಗಳನ್ನು ನೋಡಿ ಪೋಷಕರು ಖುಷಿ ಪಡುವುದು ಇಲ್ಲಿ ಸಾಮಾನ್ಯ.

ಇಲ್ಲಿ ಮಕ್ಕಳಿಗೆ ಹೋಮ್ ವರ್ಕ್ ಕೊಡುವಂತಿಲ್ಲ. ಏನಾದರೂ ಹೋಮ್ ವರ್ಕ್ ಕೊಟ್ಟುಬಿಟ್ಟರೆ ಪೋಷಕರಿಗೆ ಇಷ್ಟವಾಗುವುದಿಲ್ಲ. ತಮ್ಮ ವೇಳೆಗೆ ಅಡ್ಡಿ ಹಾಗೂ ಮಕ್ಕಳ ಬೆಳವಣಿಗೆ, ಮನಸ್ಸಿಗೆ, ಆಟಕ್ಕೆ, ವಿಶ್ರಾಂತಿಗೆ, ಹೋಮ್ ವರ್ಕ್ ಹೊರೆಯಾಗುವುದು ಎಂದು ಪೋಷಕರು ಮತ್ತು ನಾಗರಿಕರ ಸಂಸ್ಥೆಗಳು ದೂರು ಸಲ್ಲಿಸುತ್ತಾರೆ. ಮಕ್ಕಳು ಸ್ಪಷ್ಟವಾಗಿ ಓದಲು ನೆರವಾಗಲೆಂದು ಸುಮಾರು ವರ್ಷಗಳಿಂದ 'ರೀಡಿಂಗ್ ಕ್ಲಬ್' ಮಾಡಿ, ಮಕ್ಕಳು ವಾರಕ್ಕೆ ಇಷ್ಟು ಪುಸ್ತಕಗಳನ್ನು ಓದಬೇಕು ಎಂಬ ನಿಯಮ ಜಾರಿಯಲ್ಲಿದೆ.

ಕಿಂಡರ್ ಗಾರ್ಟನ್ ನಿಂದ ಆರನೇ ತರಗತಿಯವರೆಗೂ ಪ್ರೈಮರಿ ಶಾಲೆ. ಆದಷ್ಟೂ ಮಾನಸಿಕ ಒತ್ತಡಕ್ಕೆ ಆಸ್ಪದವಿಲ್ಲದೆ ಸುಖವಾಗಿ ಸಂತೋಷದಿಂದ ಹೆಚ್ಚಿನ ಜವಾಬ್ದಾರಿ ಇಲ್ಲದೆ ಇಲ್ಲಿನ ಮಕ್ಕಳು ಪ್ರೈಮರಿ ಶಾಲೆಯ ಓದನ್ನು ಮುಗಿಸುತ್ತಾರೆ. ಏಳನೇ ತರಗತಿಯಿಂದ ಹನ್ನೆರಡನೇ ತರಗತಿಗೆ ಹೈಸ್ಕೂಲ್. ಆ ನಂತರ ವಿಶ್ವವಿದ್ಯಾಲಯ.

ಏಳನೇ ತರಗತಿಯಿಂದಲೇ ಶಾಲೆಗಳಲ್ಲಿ ಫೈಲಿಂಗ್ ವ್ಯವಸ್ಥೆ ಇದೆ. ವಿದ್ಯಾರ್ಥಿಗಳ ನೋಟ್ಸ್‌ಗಳನ್ನು ಫೈಲ್ ಮಾಡಿ ಶಾಲೆಯಲ್ಲೇ ಇಡಲಾಗುತ್ತದೆ. ಮಕ್ಕೀ ಕಾ ಮಕ್ಕಿ ಬಾಯಿಪಾಠದ ವ್ಯವಸ್ಥೆಗೆ ಇಲ್ಲಿ ಅವಕಾಶವಿಲ್ಲ. ಬಹುತೇಕ ಅವರ ಸ್ವಂತ ಬುದ್ಧಿಯ ಉತ್ತರಕ್ಕೆ ಉತ್ತೇಜನ ನೀಡಲಾಗುತ್ತದೆ.

ನಮ್ಮ ದೇಶದಲ್ಲಿ ಇದ್ದಂತೆ ಮಣಭಾರದ ಚೀಲವನ್ನು ಹೊರುವ ಕಷ್ಟ ಇಲ್ಲ ಎನ್ನುವುದು ನಿಜಕ್ಕೂ ಖುಷಿ ಕೊಡುವ ಅಂಶವೇ. ಜತೆಗೆ ಪ್ರೈಮರಿ ಶಾಲೆ ಎನ್ನುವುದು ಇಲ್ಲಿ ಮಕ್ಕಳಿಗೆ ಅಥವಾ ಪೋಷಕರಿಗೆ ಹೊರೆ ಅನ್ನಿಸುವುದೇ ಇಲ್ಲ. ಮಕ್ಕಳೂ ಸಂತೋಷದಿಂದ ಶಾಲೆಗೆ ಹೋಗುತ್ತಾರೆ. ಪೋಷಕರೂ ಮನೆಯಲ್ಲಿ ಹೋಮ್‌ವರ್ಕ್ ಕಾಟವಿಲ್ಲದೆ ಸುಖವಾಗಿರುತ್ತಾರೆ.

ಆದರೆ ಇಲ್ಲಿ ಖಾಸಗಿ ಶಾಲೆಗಳು ತುಂಬ ದುಬಾರಿ. ಶುಲ್ಕ ಬಹಳ ಭಾರ. ಒಂದು ವರ್ಷದ ಶಾಲಾ ಶುಲ್ಕದಲ್ಲಿ ಮಧ್ಯಮ ವರ್ಗದವರು ಸಲೀಸಾಗಿ ಸಂಸಾರ ನಡೆಸಬಹುದು. ಆದರೆ ಖಾಸಗಿ ಶಾಲೆಯವರು ಶಾಲೆಯ ಆವರಣ, ಆಟದ ಮೈದಾನ, ಕ್ರಿಕೆಟ್, ಈಜುಕೊಳ, ಆರ್ಕೆಸ್ಟ್ರಾ ಉಪಕರಣಗಳು, ಒಳಾಂಗಣ ಬಾಸ್ಕೆಟ್ ಬಾಲ್ ಮೈದಾನ, ಆಧುನಿಕ ಉಪಕರಣಗಳ ವ್ಯವಸ್ಥೆ ಮತ್ತು ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಖಾಸಗಿ ಮತ್ತು ಸಾರ್ವಜನಿಕ ಶಾಲೆಯ ಕಲಿಸುವಿಕೆ, ಶಿಸ್ತು, ಸಂಯಮ ಮಾತ್ರ ಅದಕ್ಕೆ ತಕ್ಕಂತೆಯೇ ಇರುತ್ತದೆ.

ನಮ್ಮ ಊರಿನ ಶಾಲೆಗಳಲ್ಲೂ ಪುಸ್ತಕದ ಹೊರೆಯನ್ನು ಕಡಿಮೆ ಮಾಡಿದರೆ ಆಗದೆ? ಎಲ್ಲ ಪಠ್ಯ, ನೋಟ್ಸ್‌ಗಳನ್ನು ಶಾಲೆಯಲ್ಲೇ ನೀಟಾಗಿ ಇಡಲು ಆಗುವುದಿಲ್ಲವೆ? ಹೋಮ್‌ವರ್ಕ್ ರದ್ದು ಮಾಡಿದರೆ ಏನಾಗುತ್ತದೆ? ■



. ಪುಸ್ತಕ ಪ್ರೀತಿ ಹೆಚ್ಚು ಮಾಡಿಕೊ ಅಂತಾಳೆ ಅಮ್ಮ! ಒಲಿಂಪಿಕ್ಸ್ ನಲ್ಲಿ ಆಡುವ ಕನಸು ಹೇಳ್ತಾಳೆ ಬೇರೆ!



ಈ ಧಾರಾವಾಹಿನಲ್ಲಿ ಬರ್ತಾ ಇರೋದು... ಕಾಲ್ಪನಿಕ ಅಂತ ಇದೆ... ಆದರೆ ಎಲ್ಲಾ ನಮ್ಮ ಮನೆಯ ಕಥೆನೇ... ಇದೆಯಲ್ಲಾ...!



2000 ರೂಪಾಯಿ ನೋಟಿಗೆ ಚಿಲ್ಲರೆ ಇಲ್ಲವಂತೇರಿ, ಇನ್ನೊಂದು ಸೀರೆ ತಗೊಂಡು ಬಿಡೋಣರಿ!